# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್ ಸಿ /ಎಸ್ ಟಿ ನಂ : 16/2023

ಪ್ರ.ವ.ಬೋ. ದಿನಾಂಕ - 12.11.2025

| | | | |
|---|---|---|---|
| ಸಾಕ್ಷಿದಾರರ ಹೆಸರು | - ಜಯಶೀಲನಾಯ್ಕ | ಪ್ರಾಸಾ | 06 |
| ತಂದೆಯ ಹೆಸರು | - ಹಂಪಾನಾಯ್ಕ | ಚಾಸಾ | 06 |
| ವಯಸ್ಸು | - 55 ವರ್ಷ | | |
| ಉದ್ಯೋಗ | - ಕೂಲಿ ಕೆಲಸ | | |
| ವಾಸ ಸ್ಥಳ | - ಚನ್ನಗನಹಳ್ಳಿ ಗ್ರಾಮ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಸಾಕ್ಷಿಗೆ ನಿಪಿ:5 ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ:5(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ. 2.3.2023 ರಂದು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸ ಠಾಣೆಯಲ್ಲಿ 1 ನೇ ಆರೋಪಿ ಇದ್ದನು. ಅವನನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಗೈರು ಹಾಜರಿದ್ದು, ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿಪರ ವಕೀಲರು ತಿಳಿಸಿರುತ್ತಾರೆ. 1 ನೇ ಆರೋಪಿ ಒಂದು ಕೋಲನ್ನು ಹಾಜರುಪಡಿಸಿದ್ದು, ಅದರಿಂದ ಚಾಸಾ:1 ರವರಿಗೆ ಹೊಡೆದಿದ್ದ ಬಗ್ಗೆ 1 ನೇ ಆರೋಪಿ ತಿಳಿಸಿರುತ್ತಾನೆ. ಪೋಲಿಸರು ಮಹಜರ ಮಾಡಿ, ಸದರಿ ಕೋಲನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಎಂಓ:1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಫೋಟೊವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ:6 ಎಂದು ಗುರುತಿಸಲಾಯಿತು.

**- ಪಾಟೀಸವಾಲು - ಆರೋಪಿಪರ ಶ್ರೀಮತಿ ಪಿ.ಆರ್. ವಕೀಲರಿಂದ ಕೆಎಂಎನ್ ವಕೀಲರ ಪರವಾಗಿ -**

ಮಹಜರಿಗೆ ಬರುವಂತೆ ನನಗೆ ನೋಟೀಸನ್ನು ನೀಡಿದ್ದರು. ಪೋಲಿಸ್ ಠಾಣೆಗೆ 12.15 ಗಂಟೆಗೆ ಹೋಗಿದ್ದೆನು. ನಾನು ಠಾಣೆಗೆ ಹೋದಾಗ 1 ನೇ ಆರೋಪಿ ಮತ್ತು ಪೋಲಿಸರು ಠಾಣೆಯಲ್ಲಿ ಇದ್ದರು. ನಾನು ಹೋದಾಗ ಎಂಓ:1 ಪೋಲಿಸ್ ಠಾಣೆಯಲ್ಲಿತ್ತು. ಪೋಲಿಸರು ಎಂಓ:1 ನ್ನು ಆರೋಪಿಗೆ ಕೊಟ್ಟಿದ್ದು ನಂತರ ಆರೋಪಿಯು ಕೋಲನ್ನು ನಮಗೆ ತೋರಿಸಿರುತ್ತಾರೆ. ಚಾಸಾ:1 ನಮಗೆ ಪರಿಚಯವಿದ್ದು ನಮ್ಮ ಊರಿನವರೇ ಇರುತ್ತಾರೆ. ಚಾಸಾ:1 ಮತ್ತು ನಾನು ಒಂದೇ ಜಾತಿಯವರು ಎಂದರೆ ಸರಿ. ಎಂಓ:1 ರಂತಹ ವಸ್ತುಗಳು ಜಮೀನುನಲ್ಲಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಮಹಜರಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. ನಮಗೂ ಮತ್ತು ಆರೋಪಿತರಿಗೂ ದ್ವೇಷವಿದ್ದು ಚಾಸಾ:1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ ಮಾಡಿಲ್ಲ, ಎಂಓ:1 ನ್ನು 1 ನೇ ಆರೋಪಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.